ಪದಬಂಧ



ಎಡದಿಂದ ಬಲಕ್ಕೆ:

1. ಅವಸರದಲ್ಲಿ ಹೊರಡುವಾಗ ಕೆಟ್ಟ ಮಾತು ಬೇರೆ ಏಕೆ? (4)
3. ದೇಶ ರಕ್ಷಣೆಯಲ್ಲಿ ಸಮುದ್ರವೂ ಸೇರಿದೆ ತಾನೇ? (3)
4. ಮೂರ್ಖತನದ ಪರಿಣಾಮ ಕಂಡು ಕರುಣೆ ಬಂದೀತು (3)
6. ಕವಡೆ ಮಾರಿ ಹಣ ಗಳಿಸುವುದಕ್ಕೆ ನಿಯಂತ್ರಣ ಬಂದಿದೆ (4)
7. ಮೂರ್ಖರಿಗೆ ಪಾಠ ಕಲಿಸಿದ್ದು ಮೊಸಳೆ ತಾನೇ? (3)
9. ಚೆನ್ನಾಗಿ ಸಲಹಿದ್ದರಿಂದ ಬೆಳೆ ಸಮೃದ್ಧ (3)
11. ಮನಸು ತಿರುಗಿಸಿ ನೋಡಿದರೆ 'ಒಳ್ಳೆಯ ಬುದ್ಧಿ' (3)
13. ಹೇರಳವಾಗಿದೆ ಸರಿ. ಆದರೆ ಸತ್ವವೇ ಹಿಂದು ಮುಂದು (3)
15. ಮತ್ತೆ ಕೆಟ್ಟದ್ದೇನಲ್ಲ. ಬರೀ ತೀಕ್ಷ್ಣ ನುಡಿ ಅಷ್ಟೆ (4)
17. ಗರಿ-ಪುಕ್ಕಗಳ ಪ್ರದರ್ಶನ ಕಂಡು ರೋಮಾಂಚನ (3)
18. ಸಾಲವೇನಿಲ್ಲ ಆದರೂ ಏಕೆ ಹೀಗೆ ಒತ್ತಾಯದ ಸಂಗ್ರಹ? (3)
19. ಆ ಊರಿನ ಸುತ್ತ ಒತ್ತಾದ ಅಡವಿ ಐಶ್ವರ್ಯ (4)

ಮೇಲಿಂದ ಕೆಳಕ್ಕೆ:

1. ಅಧ್ಯಯನಕ್ಕೇ ಅಲ್ಲಿ ಪ್ರಾಮುಖ್ಯ ಹೆಚ್ಚು (3)
2. ಮೇಣದರ ಮನೆಯಲ್ಲಿ ಆಕೆಯ ಪತಿ! (3)
3. ಶಂಕೆ ಅನವಶ್ಯ; ಅದು ಚಂದ್ರನೇ ಹೌದು (3)
5. ಕಲ್ಲು ತೆಗೆಯಲು ಹೋದಾಗ ಬೆಳಕೇ ಇರಲಿಲ್ಲ (3)
7. ಕಡಲ ತೀರದ ಚೆನ್ನಾದ ನಗರದ ಹಳೇ ಹೆಸರು (4)
8. ಕೀರ್ತಿಗೆ ತಕ್ಕಂತೆ ನೆತ್ತರಿನ ಹೊಳಪು (4)
9. ಹರಳುಗಳ ಕಾವಲಿಗೆ ಗಟ್ಟಿಮನುಷ್ಯ (4)
10. ಹುಂಡಿಗೆಂದು ಸುತ್ತಿ ತಂದ ಚಿಲ್ಲರೆ ಹಣ (4)
12. ಪೂ ಮಾಲೆ ಕತ್ತರಿಸಿ ಸೊಕ್ಕು ತೋರಬೇಕೇ? (3)
14. ಮರೆಯಲು ಸಾಧ್ಯವೇ ಅಗದ ಮುಂಡಾಸು (3)
15. ಕರ್ಕಶವಾಗಿ ಕಿರುಚಿದ ನೋಡಿ, ದಡ್ಡ (3)
16. ತವರೂರಿನಿಂದ ತಂದದ್ದು ಸಾರಿಗೆ ತಕ್ಕ ಬೇಳೆ ಕಾಳು (3)

## 26-12-13ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಬ್ಬರ; 3. ಕಾವೇರಿ; 4. ಹಳತು; 6. ಪರ ನೆಲೆ; 7. ಆಗಮನ; 9. ತಡಸಲು; 11. ಜ್ಞಾನಧನ; 15. ಪಲ್ಲಟ; 16. ವಲ್ಲಭ; 17. ಪಹರೆ.

ಮೇಲಿಂದ ಕೆಳಕ್ಕೆ:

1. ಅರಿಕೆ; 2. ರಹಸ್ಯ; 3. ಕಾಮನೆ; 5. ತುರುಗ; 6. ಪತಿತ; 8. ನಳಿನ; 10. ಸಲ್ಲಾಪ; 12. 'ನವಭ' (ಭವನ ತಲೆಕೆಳಗು); 13. ಮಂಟಪ; 14. ತಾವರೆ.

# ಪ್ರಶ್ನಾಂಕಣ

## ಸಹರಾ -ಮರುಭೂಮಿ ಆದದ್ದು ಹೇಗೆ?

ಸಹರಾ-ಅದು ಪ್ರಸ್ತುತ ಧರೆಯ ಅತಿ ವಿಸ್ತಾರ, ಅತಿ ರುದ್ರ, ಬಿಸಿ ಮರುಭೂಮಿ (ಚಿತ್ರ 2 ಭೂಪಟ ನೋಡಿ). ಆಫ್ರಿಕಾ ಖಂಡದ ಉತ್ತರಾರ್ಧದಲ್ಲಿ ಅವಿಚ್ಛಿನ್ನವಾಗಿ ಹರಡಿರುವ ಈ ಮರುಭೂಮಿ ಸುಮಾರು ಒಂಬತ್ತು ದಶಲಕ್ಷ ಚದರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ವ್ಯಾಪಿಸಿದೆ. ಉಸುಕು ಮುಸುಕಿದ ನಿಸ್ಸಾರ ನಿರಾರ್ದ್ರ ಬಯಲುಗಳ, ಬರೀ ಬಂಡೆ ಗುಂಡುಗಳು ಹರಡಿದ ಪ್ರದೇಶಗಳ, ಬೋಳು ಗುಡ್ಡ ಬೆಟ್ಟಗಳು ಆವರಿಸಿದ ನೆಲೆಗಳ ಸಹರಾದ ಸದ್ಯದ ದೃಶ್ಯಗಳೆಲ್ಲ ನರಕ ಸದೃಶ (ಚಿತ್ರ-1).

ಆಶ್ಚರ್ಯ ಏನೆಂದರೆ ಇದೇ ಸಹರಾ ಈಗ್ಗೆ ಎರಡು ಸಾವಿರ ವರ್ಷ ಹಿಂದಿನವರೆಗೂ ಜಲಭರಿತವಾಗಿತ್ತು, ಸಸ್ಯಭರಿತವಾಗಿತ್ತು! ಈ ಮರುಭೂಮಿಯ ಇತಿಹಾಸ ಕುರಿತ ಶೋಧಗಳು ಮತ್ತು ಪುರಾತತ್ವ ಉತ್ಖನನಗಳು ಪ್ರಾಚೀನ ಸಹರಾ ಹಸಿರಾಗಿತ್ತೆಂಬುದನ್ನು ಸ್ಪಷ್ಟಪಡಿಸಿವೆ. ತುಂಬಿ ಹರಿಯುತ್ತಿದ್ದ ನದಿಗಳು, ಧಾರಾಳ ಮಳೆ ಅಡವಿ-ಹುಲ್ಲುಗಾವಲುಗಳು... ಅವನ್ನೆಲ್ಲ ಆಶ್ರಯಿಸಿದ್ದ ಪ್ರಾಣಿಗಳು, ಕೃಷಿ ಆಧಾರಿತ ಮಾನವ ಸಮಾಜಗಳು ಅಲ್ಲಿ ನೆಲೆಗೊಂಡಿದ್ದ ಹೇರಳ ಅವಶೇಷಗಳು ಸಾಕ್ಷ್ಯಗಳು ಲಭಿಸಿವೆ.

ಹಾಗಾದರೆ ಸಹರಾ ಇಂಥ ಘೋರ ಮರುಭೂಮಿಯಾಗಿ ರೂಪಾಂತರಗೊಂಡಿದ್ದು ಹೇಗೆ?

ಆ ರೂಪಾಂತರ ಪ್ರಾರಂಭವಾದದ್ದು ಈಗ್ಗೆ ಸುಮಾರು ಹನ್ನೊಂದು ಸಾವಿರ ವರ್ಷ ಹಿಂದೆ. ಆಗ ಭೂಮಿ 'ಹಿಮಯುಗ'ದ ಹಿಡಿತದಲ್ಲಿ ಸಿಲುಕಿತ್ತು. ಅದರ ಪರಿಣಾಮವಾಗಿ ಧರೆಯ ಮಾರುತ ವ್ಯವಸ್ಥೆಯಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಒಡಮೂಡಿದುವು. ಆಗಿನ ಸಹರಾ ಪ್ರದೇಶದತ್ತ ಮಳೆ ಮೋಡಗಳನ್ನು ಹೊತ್ತು ತರುತ್ತಿದ್ದ ಮಾರುತಗಳ ಪ್ರಮಾಣ ಮತ್ತು ದಿಕ್ಕು



1




2

ಬದಲಾಗಿ ಸಹರಾ ಪ್ರದೇಶದಲ್ಲಿ ಮಳೆ ಪ್ರಮಾಣ ಕುಗ್ಗತೊಡಗಿ ಕ್ರಮೇಣ ಎರಡು-ಮೂರು ಸಾವಿರ ವರ್ಷಗಳ ಅವಧಿಯಲ್ಲಿ ಬರಗಾಲವೇ ಶಾಶ್ವತವಾಗತೊಡಗಿತು. ಜೊತೆಗೆ ಈಗ್ಗೆ ಸುಮಾರು ಆರು ಸಾವಿರ ವರ್ಷ ಹಿಂದೆ ಅಲ್ಲಿಗೆ ದನಗಾಹೀ ಮನುಷ್ಯರ ಭಾರೀ ತಂಡಗಳು ವಲಸೆ ಬಂದುವು. ಈ ವೇಳೆಗಾಗಲೇ ದಟ್ಟಡವಿಗಳೂ ಸಮೃದ್ಧ ಹುಲ್ಲುಗಾವಲುಗಳೂ ಕಣ್ಮರೆಯಾಗಿದ್ದು ವಿರಳ ಸಸ್ಯಾಚ್ಛಾದನೆಯಷ್ಟೇ ಉಳಿದಿತ್ತು. ಹಾಗೆ ಅಳಿದುಳಿದಿದ್ದ ಹುಲ್ಲು, ಪೊದೆ, ಕುರುಚಲು ಗಿಡಗಳನ್ನೆಲ್ಲ ದನಗಳು, ಕುರಿ-ಮೇಕೆಗಳ ಹಿಂಡುಗಳು ಬೇರನ್ನೂ ಬಿಡದೆ ಮೇಯ್ದು ಮುಗಿಸಿದುವು. ಆ ವೇಳೆಗೆ ಈಗ್ಗೆ ಸಮೀಪ ನಾಲ್ಕು ಸಾವಿರ ವರ್ಷ ಹಿಂದಿನ ವೇಳೆಗೆ- ವೃಷ್ಟಿ ಪ್ರಮಾಣ ಮತ್ತೂ ಕುಸಿದು, ಅಲ್ಲಿದ್ದ ಸಸ್ಯ ವಿಹಿತ 'ಮೆಡಿಟರೇನಿಯನ್ ವಾಯುಗುಣ' ಸಂಪೂರ್ಣ ಕಳೆದುಹೋಗಿ ಸಹರಾ ಬಿಸಿ ಮರುಭೂಮಿ ಆಗತೊಡಗಿತು. ಮುಂದೆ ಅಲ್ಲಿದ್ದ ಸರೋವರಗಳೆಲ್ಲ ಬತ್ತಿ, ನದಿಗಳೆಲ್ಲ ಒಣಗಿ, ನೆಲವೆಲ್ಲ ಬರಡಾಗಿ ಈಗ್ಗೆ ಎರಡು ಸಾವಿರ ವರ್ಷ ಹಿಂದಿನ ವೇಳೆಗೆ ಸಹರಾ ಈಗಿನ ಸ್ವರೂಪ ಪಡೆಯಿತು. ಎಂಥ ಸೋಜಿಗದ, ದುರಂತದ ರೂಪಾಂತರ!

■ ಎನ್. ವಾಸುದೇವ್